RNU AIR DHARWAD

# DECEMBER 10, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಕಲಬುರಗಿ ತೊಗರಿಗೆ, ಜಿ.ಐ. ಟ್ಯಾಗ್; ಬೆಂಬಲ ಬೆಲೆ ಹೆಚ್ಚಿಸಲು, ಕೇಂದ್ರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗಕ್ಕೆ, ರಾಜ್ಯದ ಮನವಿ.**
- **ಯುವನಿಧಿ ಯೋಜನೆ: 1 ಲಕ್ಷ 45 ಸಾವಿರದ 978 ಉದ್ಯೋಗಾಕಾಂಕ್ಷಿಗಳಿಗೆ, ನಿರುದ್ಯೋಗ ಭತ್ಯೆ ಪಾವತಿ.**
- **ಬೆಳಗಾವಿ ಪೀರನವಾಡಿಯ, ಗಾಂಧಿ ಭವನದಲ್ಲಿ, 26 ಹಾಗೂ 27ನೇ ತಾರೀಖಿನಂದು, ‘ಗಾಂಧಿ ಭಾರತ‘ ವಿಶೇಷ ಕಾರ್ಯಕ್ರಮ.**
- **ಮಡಿಕೇರಿ ತಾಲೂಕು, ಗಾಳಿಬೀಡು ಗ್ರಾಮ ಪಂಚಾಯಿತಿ ಹಾಗೂ ಉಡುಪಿ ಜಿಲ್ಲಾ ಪಂಚಾಯ್ತಿಗೆ, ರಾಷ್ಟ್ರ ಪ್ರಶಸ್ತಿಯ ಗರಿ.**

<><><>

**ಈಗ ವಾರ್ತೆಗಳ ವಿವರ**

<><><>

**ಕಲಬುರಗಿ ಜಿಲ್ಲೆಯಲ್ಲಿ ಬೆಳೆಯುವ ತೊಗರಿಗೆ, ಜಿ.ಐ. ಟ್ಯಾಗ್ ಕ್ಲಾಸ್–31 ಪ್ರಮಾಣ ಪತ್ರ ಲಭಿಸಿದೆ. ಹೀಗಾಗಿ, ಶೇಕಡ 20 ರಿಂದ 25 ರ ಸ್ಟ, ಕನಿಷ್ಟ ಬೆಂಬಲ ಬೆಲೆ ಹೆಚ್ಚಿಸಿ, ಖರೀದಿಸಲು, ಕೇಂದ್ರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗವನ್ನು ಕೋರಲಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ. ವಿಧಾನ ಪರಿ ‘ತ್‌ನಲ್ಲಿ, ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಅವರು ಮಂಡಿಸಿದ, ಗಮನ ಸೆಳೆಯುವ ಸೂಚನೆಗೆ, ಸಚಿವರು ಪ್ರತಿಕ್ರಿಯಿಸಿದರು. ಕಲಬುರಗಿ ಜಿಲ್ಲೆಯಲ್ಲಿ 30 ಲಕ್ಷ ರೈತರು ತೊಗರಿ ಬೆಳೆಯುತ್ತಿದ್ದಾರೆ. ಕೇಂದ್ರ ಸರ್ಕಾರಕ್ಕೆ ಮತ್ತೊಂದು ಪತ್ರ ಬರೆದು ಚರ್ಚಿಸಿ, ಕಲಬುರಗಿ ಜಿಲ್ಲೆಯ ತೊಗರಿಗೆ ಬೆಂಬಲ ಬೆಲೆ ಘೋಷಿಸಲಾಗುವುದು ಎಂದು, ಅವರು ಹೇಳಿದರು.**

<><><>

ಬೆಳಗಾವಿ ಜಿಲ್ಲೆ, ಉಚಗಾಂವ ಹೋಬಳಿಯ, ಬೆಳಗುಂದಿ ಗ್ರಾಮದ, ಪ್ರಗತಿಪರ ರೈತ ಕಿಟ್ಟು ಚವ್ಹಾಣ್ ಅವರ ಜಮೀನಿಗೆ, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ ಹಾಗೂ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಭೇಟಿ ನೀಡಿ, ವೀಕ್ಷಿಸಿದರು. ರೈತ ಕಿಟ್ಟು ಚವ್ಹಾಣ್ ಅವರು, 10 ಎಕರೆಯಲ್ಲಿ ಕೃಷಿ, ತೋಟಗಾರಿಕೆ, ಅರಣ್ಯ, ಜಾನುವಾರು ಸಾಕಾಣಿಕೆ ಕೈಗೊಂಡು, ಸಮಗ್ರ ಕೃಷಿ ಅಳವಡಿಸಿಕೊಂಡು ಸ್ವಾವಲಂಬಿಯಾಗಿದ್ದಕ್ಕೆ, ಮೆಚ್ಚುಗೆ ವ್ಯಕ್ತಪಡಿಸಿದರು.

<><><>

ಅಕ್ರಮವಾಗಿ, ಪಡಿತರ ಚೀಟಿ ಹೊಂದಿದ ಪ್ರಕರಣದಲ್ಲಿ, ತಪ್ಪಿತಸ್ಥರೆಂದು ಸಾಬೀತಾದ ವ್ಯಕ್ತಿಗಳ ವಿರುದ್ಧ, ನ್ಯಾಯಾಲಯದ ಆದೇಶದನ್ವಯ, ಕಾನೂನು ರೀತಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಕೆ.ಎಚ್.ಮುನಿಯಪ್ಪ ಸ್ಪಷ್ಟ ಪಡಿಸಿದ್ದಾರೆ. ವಿಧಾನ ಪರಿ ‘ತನಲ್ಲಿ, ಸದಸ್ಯರ ಚುಕ್ಕೆ ಗುರುತಿನ ಪ್ರಶ್ನೆಗೆ ಸಚಿವರು ಉತ್ತರಿಸಿದರು. ರಾಜ್ಯಾದ್ಯಂತ ಜನವರಿ 2021 ರಿಂದ ಮೇ 2023ರ ಅವಧಿಯಲ್ಲಿ, 3 ಲಕ್ಷ 35 ಸಾವಿರದ 463 ಆದ್ಯತಾ ಪಡಿತರ ಚೀಟಿಗಳನ್ನು, ಅನರ್ಹರು ಪಡೆದಿದ್ದು ಪತ್ತೆ ಹಚ್ಚಲಾಗಿದೆ. 13 ಕೋಟಿ 51 ಲಕ್ಷ 30 ಸಾವಿರದ 858 ರೂಪಾಯಿಗಳ ದಂಡ ವಿಧಿಸಲಾಗಿದೆ ಎಂದರು.

<><><>

ರಾಜ್ಯದಲ್ಲಿ ಈ ವರೆಗೂ, 1 ಲಕ್ಷ 81 ಸಾವಿರದ 699 ಪದವಿಧರರು, ಯುವನಿಧಿ ಯೋಜನೆ ಅಡಿ, ಹೆಸರು ನೋಂದಾಯಿಸಿದ್ದಾಗಿ, ಕೌಶಲ ಅಭಿವೃದ್ಧಿ, ಮತ್ತು ಜೀವನೋಪಾಯ ಖಾತೆ ಸಚಿವ ಶರಣ ಪ್ರಕಾಶ ಪಾಟೀಲ ತಿಳಿಸಿದ್ದಾರೆ. ವಿಧಾನ ಪರಿ ‘ತ್‌ನಲ್ಲಿ, ಸದಸ್ಯ ಕೆ.ಎಸ್.ನವೀನ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ವರೆಗೂ 1 ಲಕ್ಷ 45 ಸಾವಿರದ 978 ಉದ್ಯೋಗಾಕಾಂಕ್ಷಿ ಅರ್ಹ ಪದವೀಧರರ ಖಾತೆಗಳಿಗೆ,ನಿರುದ್ಯೋಗ ಭತ್ಯೆ ಪಾವತಿಸಲಾಗಿದೆ ಎಂದರು. ಯುವನಿಧಿ ಯೋಜನೆ ಅಡಿ, ನೋಂದಾಯಿತ ಅಭ್ಯರ್ಥಿಗಳು, ಪ್ರತಿ ತಿಂಗಳು ಡಿಕ್ಲರೇಶನ್ ನೀಡುವುದು ಕಡ್ಡಾಯವಾಗಿದೆ. ನೀಡದಿದ್ದಲ್ಲಿ, ಭತ್ಯೆ ಸ್ಥಗಿತಗೊಳ್ಳಲಿದೆ ಎಂದು, ಸಚಿವರು ಸ್ಪಷ್ಟ ಪಡಿಸಿದರು.

<><><>

ದೇಶಾದ್ಯಂತ, ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನವನ್ನು ಆಚರಿಸಲಾಯಿತು. 1 ರಿಂದ 19 ವ ’ರ್ದೊಳಗಿನ ವಿದ್ಯಾರ್ಥಿಗಳಿಗೆ, ಜಂತುಹುಳುವಿನ ಬಾಧೆಯನ್ನು ನಿವಾರಿಸುವ ಮಾತ್ರೆಗಳನ್ನು ಈ ವಾರ ಪೂರ್ತಿ ವಿತರಿಸಲಾಗುತ್ತಿದೆ. ಇದಕ್ಕಾಗಿ ಅಂಗನವಾಡಿಗಳಿಂದ, ಪ್ರಥಮ ವ ’ರ್ದ ಪದವಿ ಕಾಲೇಜುಗಳ ವರೆಗೆ, ಜಂತುಹುಳು ನಿವಾರಣೆ ಕಾರ್ಯಕ್ರಮ ನಡೆಸಲಾಗುತ್ತಿದೆ. ಮಕ್ಕಳ ಆರೋಗ್ಯಪೂರ್ಣ ಬೆಳವಣಿಗೆಗೆ ಅಡ್ಡಿ ಉಂಟು ಮಾಡುವ ಜಂತುಹುಳಗಳ ನಿವಾರಣೆಗೆ, ಆರು ತಿಂಗಳಿಗೊಮ್ಮೆ ಈ ಮಾತ್ರೆಗಳನ್ನು ನೀಡಲಾಗುತ್ತದೆ.

<><><>

“ವಯಕ್ತಿಕ ಶುಚಿತ್ವ ಹಾಗೂ ಸ್ವಚ್ಛತೆ ಪಾಲನೆ ಬಗ್ಗೆ, ಮಕ್ಕಳಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಜಂತುಹುಳವನ್ನು ನಿಯಂತ್ರಿಸಿದರೆ, ಶೇಕಡ 70ರ ‘ಷ್ಟು ರಕ್ತಹೀನತೆ ಸಮಸ್ಯೆಯನ್ನು ನಿಯಂತ್ರಿಸಲು, ಸಾಧ್ಯ” ಎಂದು, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ಧಾರವಾಡ ಜಿಲ್ಲೆಯಾದ್ಯಂತ, 1 ರಿಂದ 19 ವರ್ಷದೊಳಗಿನ, 5 ಲಕ್ಷ 80 ಸಾವಿರದ 127 ಮಕ್ಕಳಿಗೆ, ಜಂತುಹುಳು ನಿವಾರಣೆ, ಅಲ್ಬೆಂಡಜೋಲ್ ಮಾತ್ರೆ, ವಿತರಿಸಲಾಗುತ್ತಿದೆ ಎಂದರು.

<><><>

ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಧ್ವನಿ 34 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ, 1924ರಲ್ಲಿ ಬೆಳಗಾವಿಯಲ್ಲಿ ನಡೆದ, ಕಾಂಗ್ರೆಸ್ ಮಹಾಧಿವೇಶನದ, ಶತಮಾನೋತ್ಸವ ಆಚರಣೆಯ ಪೂರ್ವಸಿದ್ಧತೆಗಳನ್ನು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಪರಿಶೀಲಿಸಿದರು. ಟಿಳಕವಾಡಿಯಲ್ಲಿರುವ ವೀರಸೌಧ, ರಾಮತೀರ್ಥನಗರದ ಗಂಗಾಧರ ರಾವ ದೇಶಪಾಂಡೆ ಸ್ಮಾರಕ ಮತ್ತು ಪೀರನವಾಡಿಯ ಗಾಂಧಿ ಭವನಕ್ಕೆ ಭೇಟಿ ನೀಡಿ ಅವರು ಮಾತನಾಡಿದರು. ‘ಗಾಂಧಿ ಭಾರತ‘ ಧ್ಯೇಯದೊಂದಿಗೆ, ವ ’ಿವಿಡಿ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಇದೇ 26 ರಂದು, ಪೀರನವಾಡಿಯ ಗಾಂಧಿ ಭವನದಲ್ಲಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಡೆಯಲಿದೆ. 27 ರಂದು ಸಾರ್ವಜನಿಕ ಸಭೆ ಆಯೋಜಿಸಲಾಗಿದ್ದು, ರಾಷ್ಟ್ರೀಯ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದರು.

<><><>

ಕೇಂದ್ರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಮಗ್ರ ಸಾಧನೆ ವಿಭಾಗದಲ್ಲಿ, ಬಡತನ ವಿಮುಕ್ತಿ ಸಾಧನೆಗೆ, ಕೊಡಗು ಜಿಲ್ಲೆ, ಮಡಿಕೇರಿ ತಾಲೂಕಿನ, ಗಾಳಿಬೀಡು ಗ್ರಾಮ ಪಂಚಾಯಿತಿಗೆ, ದೇಶಕ್ಕೆ ಪ್ರಥಮ ಸ್ಥಾನ ಲಭಿಸಿದೆ. 1 ಕೋಟಿ ರೂಪಾಯಿ ನಗದು ಬಹುಮಾನವನ್ನು ಪ್ರಕಟಿಸಲಾಗಿದೆ.

ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಶಶಿ ಕಿರಣ್ ಪ್ರದೇಶ ಸಮಾಚಾರಕ್ಕಾಗಿ ಸಂತಸ ಹಂಚಿಕೊಂಡಿದ್ದಾರೆ.

<><><>

ಪಿ.ಡಿ.ಓ. ಶಶಿ ಕಿರಣ್ ಧ್ವನಿ 50 ಸೆಕೆಂದುಗಳು

<><><>

ಉಡುಪಿ ಜಿಲ್ಲಾ ಪಂಚಾಯ್ತಿಗೆ ರಾಷ್ಟ್ರೀಯ ಮಟ್ಟದಲ್ಲಿ, ತೃತೀಯ ಪುರಸ್ಕಾರ ಹಾಗೂ 2 ಕೋಟಿ ರೂಪಾಯಿ, ನಗದು ಬಹುಮಾನ ಘೋಷಿಸಲಾಗಿದೆ. ಹೊಸ ದಿಲ್ಲಿಯ ವಿಜ್ಞಾನ ಭವನದಲ್ಲಿ, ನಾಳೆ 11ನೇ ತಾರೀಖು ಆಯೋಜಿತ ಕಾರ್ಯಕ್ರಮದಲ್ಲಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ರಾಷ್ಟ್ರೀಯ ಪುರಸ್ಕಾರಗಳನ್ನು ಪ್ರದಾನಮಾಡಿ, ಗೌರವಿಸಲಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಹಳಿಯಾಳದ ರಾಷ್ಟ್ರೀಯ ಕುಸ್ತಿಪಟು ರೋಹನ್ ಘೇವಾಡಿ, ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಹಿರಿಯರ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ, ಬೆಳ್ಳಿ ಪದಕ ಗೆದ್ದಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ರೋಹನ್ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ರೋಹನ್ ಧ್ವನಿ 28 ಸೆಕೆಂದುಗಳು

<><><>

ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಹಾಗೂ ರಾಜ್ಯಪಾಲರಾಗಿದ್ದ, ಮಂಡ್ಯದ ಸೋಮನಹಳ್ಳಿಯ ಎಸ್.ಎಂ. ಕೃಷ್ಣ ಇಂದು ಬೆಳಗಿನ ಜಾವ, ಬೆಂಗಳೂರಿನ ಸದಾಶಿವನಗರದ ಸ್ವಗೃಹದಲ್ಲಿ ವಿಧವಶರಾಗಿದ್ದಾರೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರಿಗೆ, 94 ವರ್ಷ ವಯಸ್ಸಾಗಿತ್ತು. 2023ರಲ್ಲಿ ಅವರಿಗೆ ಪದ್ಮವಿಭೂಷಣ ಪುರಸ್ಕಾರ ಸಂದಿತ್ತು. ಅಂತಾರಾಷ್ಟ್ರೀಯ ನ್ಯಾಯದ ಪ್ರಾಧ್ಯಾಪಕರಾಗಿಯೂ ಅವರು ಸೇವೆ ಸಲ್ಲಿಸಿದ್ದರು. ಗಣ್ಯರು ಸಂತಾಪ ಸೂಚಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

‘ನಮ್ಮ ಹಕ್ಕುಗಳು; ನಮ್ಮ ಭವಿಷ್ಯ ಮತ್ತು ಪ್ರಸ್ತುತತೆ’ ಧ್ಯೇಯದೊಂದಿಗೆ ಮನು ್ಯ ಬದುಕಿನ, ಹಕ್ಕುಗಳ ಮಹತ್ವವನ್ನು ಸಾರುವ ದಿನ. ಇಂದು ವಿಶ್ವ ಮಾನವ ಹಕ್ಕುಗಳ ದಿನವನ್ನು ಆಚರಿಸಲಾಗುತ್ತಿದೆ.

<><><>

ಪರಿಶಿ ್ಟ ಜಾತಿ ಮತ್ತು ಪರಿಶಿ ್ಟ ಪಂಗಡಗಳ, ಅಲೆಮಾರಿ ಸಮುದಾಯದವರು, ಸಮಾಜದ ಮುಖ್ಯವಾಹಿನಿಗೆ ಬರುವಂತಾಗಬೇಕೆಂದು, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಗದಗನಲ್ಲಿ ಆಶಿಸಿದ್ದಾರೆ.

<><><>

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ, ಕನ್ನಡ ಜ್ಯೋತಿ ರಥಯಾತ್ರೆ, ಮೈಸೂರು ತಲುಪಿದೆ. ಅರಮನೆಯ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದೆ, ಜಿಲ್ಲಾಡಳಿತ ರಥಕ್ಕೆ ಗೌರವಾರ್ಪಿಸಿ, ಸ್ವಾಗತಿಸಿತು.

<><><>

ಗದಗ ಜಿಲ್ಲೆಯಲ್ಲಿ, ಕಾರ್ಮಿಕ ಕಲ್ಯಾಣ ಯೋಜನೆಗಳ ಜಾಗ್ರತಿ ರಥಕ್ಕೆ, ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಚಾಲನೆ ನೀಡಿದರು.

<><><>

ಚಿಕ್ಕಬಳ್ಳಾಪುರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ, ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಡಿ, ತಾಯಂದಿರಿಗೆ ಜಾಗ್ರತಿ ಶಿಬಿರ ಜರುಗಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ಕಲಬುರಗಿ ತೊಗರಿಗೆ, ಜಿ.ಐ. ಟ್ಯಾಗ್; ಬೆಂಬಲ ಬೆಲೆ ಹೆಚ್ಚಿಸಲು, ಕೇಂದ್ರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗಕ್ಕೆ, ರಾಜ್ಯದ ಮನವಿ.
- ಯುವನಿಧಿ ಯೋಜನೆ; 1 ಲಕ್ಷ 45 ಸಾವಿರದ 978 ಉದ್ಯೋಗಾಕಾಂಕ್ಷಿಗಳಿಗೆ, ನಿರುದ್ಯೋಗ ಭತ್ಯೆ ಪಾವತಿ.
- ಬೆಳಗಾವಿ ವೀರನವಾಡಿಯ, ಗಾಂಧಿ ಭವನದಲ್ಲಿ, 26 ಹಾಗೂ 27ನೇ ತಾರೀಖಿನಂದು, ‘ಗಾಂಧಿ ಭಾರತ‘ ವಿಶೇಷ ಕಾರ್ಯಕ್ರಮ.
- ಮಡಿಕೇರಿ ತಾಲೂಕು, ಗಾಳಿಬೀಡು ಗ್ರಾಮ ಪಂಚಾಯಿತಿ ಹಾಗೂ ಉಡುಪಿ ಜಿಲ್ಲಾ ಪಂಚಾಯ್ತಿಗೆ, ರಾಷ್ಟ್ರ ಪ್ರಶಸ್ತಿಯ ಗರಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.